**ಎಂವಿಸಿಃ 1148/2024 ಪಿಡಬ್ಲ್ಯುಃ 1 ಪುನೀತ್ ಕುಮಾರ್**

**ಸಾಕ್ಷಿಯನ್ನು ದಿಃ 30.10.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ ಕೆ.ಎಲ್.ಎಸ್ ವಕೀಲರಿಂದಃ**

ಅಪಘಾತ ಆದಾಗ ನಾನು ಟಿಲ್ಲರ್ ನಲ್ಲಿ ಹೋಗುತ್ತಿದ್ದೆ. ಸದರಿ ಟಿಲ್ಲರ್ ಗೆ ಇಂಜಿನ್ ಇದೆ. ಅದನ್ನು ಚಲಾಯಿಸಲು ಚಾಲನ ಪರವಾನಗಿ ಇತ್ತಾ ಎಂದರೆ ಸಾಕ್ಷಿಯು ಅದನ್ನು ತಳ್ಳಿಕೊಂಡು ಹೋಗುವ ಮಶಿನ್ ಎನ್ನುತ್ತಾರೆ. ಕಾವೇರಿ ಆಸ್ಪತ್ರೆಗೆ ಹೋದಾಗ ನನಗೆ ಪ್ರಜ್ಞೆ ಇತ್ತು. ವೈಧ್ಯರ ಮುಂದೆ ಅಪಘಾತ ಹೇಗಾಯಿತು ಎಂದು ನಾನೇ ಹೇಳಿದ್ದೇನೆ. ಕಾವೇರಿ ಆಸ್ಪತ್ರೆಯ ಬಿಡುಗಡೆ ಪತ್ರ ಮತ್ತು ಗಾಯದ ಪ್ರಮಾಣ ಪತ್ರ ನಿಪಿ. 9 ಮತ್ತು ನಿಪಿ. 7 ರಲ್ಲಿ ನಾನು ಟ್ರಾಕ್ಟರ್ ಅನ್ನು ಚಲಾಯಿಸಿಕೊಂಡು ಹೋಗುತ್ತಿದ್ದಾಗ ಅಪಘಾತ ಆಗಿದೆ ಎಂದು ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಗಳನ್ನು ನನ್ನ ಮಾವ ತಂದು ಕೊಟ್ಟಿದ್ದಾರೆ. ನನಗೆ ಓದಲು ಬರೆಯಲು ಬರುವುದಿಲ್ಲ. ನಾನು 9 ನೇ ತರಗತಿ ಓದಿರುತ್ತೇನೆ.

ದಾಖಲೆಗಳಲ್ಲಿ ಸತ್ಯ ಇದೆ ಎಂದು ಹಾಜರು ಪಡಿಸಿದ್ದು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಟಿಲ್ಲರ್ ಗೆ ಟಾರ್ ರಸ್ತೆ ಮೇಲೆ ಚಲಾಯಿಸುವಂತಹ ಚಕ್ರ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಜಮೀನಲ್ಲಿ ಬಳಸುವ ಮಶಿನ್ ಅನ್ನು ನಮ್ಮ ಅನುಕೂಲಕ್ಕಾಗಿ ರಸ್ತೆ ಮೇಲೆ ತೆಗೆದುಕೊಂಡು ಹೋಗುತ್ತಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನಗೆ ಅಪಘಾತ ಪಡಿಸಿದ ವಾಹನ ಮೈಸೂರು ಕಡೆಯಿಂದ ಹಿಂದಿನಿಂದ ಬಂದು ಡಿಕ್ಕಿ ಪಡಿಸಿತು. ಆ ಕಾರಣ ಅದು ಹಿಂದಿನಿಂದ ಯಾವ ರೀತಿ ಬಂತು ಎಂದು ನನಗೆ ಗೊತ್ತಿಲ್ಲ. ರಸ್ತೆಯಲ್ಲಿ ನಾನು ನಿಗಾ ವಹಿಸದೇ ಅಜಾಗರೂಕತೆಯಿಂದ ಹೋಗುತ್ತಿದ್ದ ಕಾರಣ ನನ್ನ ತಪ್ಪಿನಿಂದಲೇ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಟಿಲ್ಲರ್ ಸಹ ಜಖಂಗೊಂಡಿದೆ. ಸ್ಕೂಟರ್ ಗೆ ಹೆಚ್ಚಿನ ಜಖಂ ಆಗಿಲ್ಲ. ಬೈಕ್ ಸವಾರ ರಸ್ತೆಯ ಎಡಭಾಗದಲ್ಲಿ ಬರುತ್ತಿದ್ದರು ಎಂದರೆ ಸರಿ. ನಿಪಿ. 5 ಫೋಟೋ ಹಾಗೂ ದಾಖಲೆಯನ್ನು ಯಾರು ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ನಾನು ಆಸ್ಪತ್ರೆಯಲ್ಲಿದ್ದೆ ಅದನ್ನು ಪೋಲೀಸರು ನೀಡಿದ್ದಾರೆ ಎನ್ನುತ್ತಾರೆ. ನಿಪಿ. 5 ಫೋಟೋಗಳಲ್ಲಿ ಟಿಲ್ಲರ್ ಗೆ ಜಖಂ ಆಗಿರುವುದು ಕಾಣಿಸಿರುವುದಿಲ್ಲ ಎಂದರೆ ಆಗಿದೆ ಎನ್ನುತ್ತಾರೆ.

3. ನನಗೆ ಅಪಘಾತದಲ್ಲಿ ಮೂಳೆ ಮುರಿತ ಆಗಿಲ್ಲ ಎಂದರೆ ಸರಿಯಲ್ಲ. ಪ್ಲೇಟ್ ಅನ್ನು ಅಳವಡಿಸಿದ್ದಾರೆ ಎನ್ನುತ್ತಾರೆ. ಅಪಘಾತದಿಂದ ಆದ ಗಾಯಗಳು ನನಗೆ ವಾಸಿಯಾಗಿದೆ ಎಂದರೆ ಸರಿಯಲ್ಲ. ನಾನು ಮೊದಲಿನಂತೆ ವ್ಯವಸಾಯ ಮಾಡಿಕೊಂಡು ಇದ್ದೇನೆ ಎಂದರೆ ಸರಿಯಲ್ಲ. ಆರು ತಿಂಗಳ ವಿಶ್ರಾಂತಿ ಪಡೆಯಲು ವೈಧ್ಯರು ಬರವಣಿಗೆಯಲ್ಲಿ ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಹಾಜರು ಪಡಿಸಲು ತೊಂದರೆ ಇಲ್ಲ. ನಿಪಿ. 10 ರಲ್ಲಿ ಕಾಣಿಸಿರುವಷ್ಟು ಪ್ರಮಾಣದಲ್ಲಿ ನಾವು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕಾಗಿ ದಾಖಲೆಯನ್ನು ಸೃಷ್ಟಿಸಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಬಿಡುಗಡೆಯಾದ ನಂತರ ನಾನು ಮತ್ತೆ ಆಸ್ಪತ್ರೆಗೆ ಬೇಟಿ ನೀಡಿಲ್ಲ ಎಂದರೆ ಸರಿಯಲ್ಲ. ಹೊರರೋಗಿಯಾಗಿ ಆಸ್ಪತ್ರೆಗೆ ಹೋದ ಬಗ್ಗೆ ದಾಖಲೆಗಳು

ಇವೆ ಹಾಜರು ಪಡಿಸಲು ತೊಂದರೆ ಇಲ್ಲ. ದಾಖಲೆಗಳಿಲ್ಲದ ಕಾರಣ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಈಗ 21 ವರ್ಷ ವಯಸ್ಸು. ನನ್ನ ಉದ್ಯೋಗ ಮತ್ತು ಆದಾಯವನ್ನು ತೋರಿಸಲು ನನ್ನ ಬಳಿ ದಾಖಲೆಗಳಿಲ್ಲ ಎಂದರೆ ಸರಿಯಲ್ಲ. ಅದನ್ನು ಹಾಜರು ಪಡಿಸಲು ತೊಂದರೆ ಇಲ್ಲ. ಅಪಘಾತದಿಂದ ಆದ ಗಾಯ ಗುಣಮುಖವಾಗಿದ್ದು ಮೊದಲಿಗಿಂತಲೂ ಹೆಚ್ಚಾಗಿ ಸಂಪಾದಿಸುತ್ತಿದ್ದು ಪರಿಹಾರ ಪಡೆಯುವುದ್ದಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ನನ್ನ ನಿರ್ಲಕ್ಷ್ಯತನದಿಂದ ಆದ ಕಾರಣ ನಾವು ಕೇಳಿದಷ್ಟು ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

1 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.